ಜೋಯಿಸರಿಗೆ ಆತ ತುಂಬಾ ಆತ್ಮೀಯನೆಂಬಂತೆ ಕಂಡು ಬಂದ.

"ಹೇಳಿ ಸ್ವಾಮಿ, ಏನಾಗಬೇಕು?"

"ಒಂದು ಫೋಟೊ ಇದೆ, ನನ್ನ ಮತ್ತು ನನ್ನ ಹೆಂಡತಿಯದ್ದು, ಆದರೆ ನಾನಿದ್ದ ಭಾಗ ಹಾಳಾಗಿದೆ; ಸರಿಮಾಡಬೇಕಿತ್ತು."

"ಮಾಡಿ ಕೊಡುವ, ಫೋಟೊ ಕೊಡಿ," ಎಂದಾಗ ಜೋಯಿಸರು ಆ ಫೋಟೊವನ್ನು ಅವನ ಕೈಗಿತ್ತರು.

"ಇದು ತುಂಬಾ ಹಳೆಯದಲ್ಲ ಸ್ವಾಮಿ! ಇದರ ಬದಲು ಹೊಸ ಫೋಟೊವನ್ನೇ ತೆಗೆಯುವ. ನಿಮ್ಮ ಹೆಂಡತಿಯನ್ನೂ ಕರೆದುಕೊಂಡು ಬನ್ನಿ."

ಜೋಯಿಸರು ಭಾವಪರವಶರಾದರು. "ಇಲ್ಲ ಅವಳಿಲ್ಲ, ಅವಳು ತೀರಿಕೊಂಡು ಈ ಫೋಟೊ ತೆಗೆದಷ್ಟೇ ವರ್ಷವಾಯಿತು. ಅಂದರೆ ಮೂವತ್ತೈದು ವರ್ಷ ಹಿಂದಿನದು." ಎಂದಾಗ ಆ ಫೋಟೊಗ್ರಾಫರ್ ಒಮ್ಮೆ ಏನನ್ನೂ ಮಾತನಾಡಲಾಗದೆ ಸುಮ್ಮನಾದ.

"ಇರಲಿ ನಾನಿದನ್ನು ಸರಿ ಮಾಡಿಕೊಡುತ್ತೇನೆ... ಆದರೆ ಮೊದಲು ನಿಮ್ಮದೊಂದು ಫೋಟೊ ತೆಗೆಯಬೇಕು, ಆಮೇಲೆ ಅದನ್ನು ಕಂಪ್ಯೂಟರಿನಲ್ಲಿ ಹಾಕಿ ಎರಡನ್ನೂ ಸೇರಿಸಿ ಸರಿಮಾಡಿ ಕೊಡುತ್ತೇನೆ," ಎಂದಾಗ ಜೋಯಿಸರೊಮ್ಮೆ ನಿಟ್ಟುಸಿರು ಬಿಟ್ಟು, "ಸದ್ಯ! ನೀವಾದರೂ ಒಪ್ಪಿದಿರಲ್ಲ... ನೀವೂ ಆಗುವುದಿಲ್ಲ ಎಂದು ಬಿಟ್ಟಿದ್ದರೆ ತುಂಬಾ ನಿರಾಸೆಯಾಗಿ ಬಿಡುತ್ತಿತ್ತು ನೋಡಿ," ಎಂದರು.

"ನನಗೆ ಗೊತ್ತಿದ್ದ ಕೆಲಸ ಕಷ್ಟವಾದರೂ ಸರಿ ಮಾಡಿಕೊಡುತ್ತೇನೆ. ನಮ್ಮಿಂದಾಗುವ ಪ್ರಯತ್ನ ಮಾಡದೇ ಯಾರಿಗೂ ಆಗುವುದಿಲ್ಲ ಎಂದು ಹೇಳಬಾರದೆಂದು ನನ್ನಪ್ಪ ಹೇಳುತ್ತಿದ್ದ. ಬನ್ನಿ ಮೊದಲು ನಿಮ್ಮ ಫೋಟೊ ತೆಗೆಯುವ," ಎಂದು ಒಳಗೆ ಕರೆದ.

ಅವರಿಬ್ಬರು ಒಳಗೆ ಕಾಲಡುತ್ತಿದ್ದಂತೆ ಕರೆಂಟು ಹೋಯಿತು. "ಛೆ! ಈ ಕರೆಂಟು ಈಗಲೇ ಹೋಗಬೇಕಾ?" ಎಂದು ತಲೆ ಚಚ್ಚಿಕೊಂಡ. ಆಗಲೇ ಗಂಟೆ ಆರು ದಾಟಿ ನಿಧಾನವಾಗಿ ಕತ್ತಲಾಗುತ್ತ ಬಂದಿತ್ತು.

"ಕರೆಂಟು ಕೂಡಲೆ ಬರುತ್ತದೆಯಾ?"

"ಒಮ್ಮೊಮ್ಮೆ ಕೂಡಲೆ ಬರುತ್ತದೆ. ನಮ್ಮ ಕೆಇಬಿಯವರು ಪ್ರತಿ ಮಂಗಳವಾರ ಮತ್ತು ಶುಕ್ರವಾರ ಇಡೀದಿನ ರಿಪೇರಿ ಕೆಲಸ ಮಾಡುತ್ತಾರೆ... ಆದರೂ ಕರೆಂಟು ಹೋಗುವುದು ಸಾಮಾನ್ಯ," ಎಂದು ಸಣ್ಣಗೆ ನಕ್ಕ.

"ಹಾಗಾದರೆ ಇವತ್ತು ಈ ಕೆಲಸ ಆಗಲಿಕ್ಕಿಲ್ಲವಾ?" ಎಂದು ಕಳವಳ ವ್ಯಕ್ತಪಡಿಸಿದರು.

"ನಾಳೆ ಬನ್ನಿ, ಬೆಳಿಗ್ಗೆಯೇ ಬನ್ನಿ. ಎಲ್ಲಿ ನಿಮ್ಮ ಮನೆ?"

"ಅದು ಅರೆಶಿರೂರು... ಇಲ್ಲಿಂದ ಒಂದುವರೆ ಗಂಟೆಯ ದಾರಿ."

"ಅಷ್ಟು ದೂರದಿಂದ ಇಲ್ಲಿಗೆ ಬಂದಿದ್ದಾ?!... ಅಲ್ಲಿಯೇ ದೊಡ್ಡ ಸ್ಟುಡಿಯೊ ಇತ್ತಲ್ಲ."

"ದೊಡ್ಡ ಅಂಗಡಿಯವರು ಈ ಸಣ್ಣ ಕೆಲಸ ಮಾಡುವುದಿಲ್ಲ ಎಂದರು. ಹಲವು ಕಡೆ ಆಗುವುದಿಲ್ಲ ಎಂದದ್ದಕ್ಕೆ ಇಲ್ಲಿತನಕ ಸ್ಟುಡಿಯೊ ಹುಡುಕುತ್ತ ಬರಬೇಕಾಯಿತು."

"ಕತ್ತಲೆಯಾಗುತ್ತ ಬರುತ್ತಿದೆ, ನೀವು ನನ್ನ ರೂಮಿನಲ್ಲಿದ್ದು ನಾಳೆ ಹೊರಡಬಹುದು."

ಜೋಯಿಸರಿಗೆ ಈಗ ಆತ ಇನ್ನೂ ಆತ್ಮೀಯನಂತೆ ಕಂಡು ಬಂದ. ತಾನು ಬಂದ ಕೆಲಸ ಆಗಲೇಬೇಕು ಎಂದುಕೊಂಡು, "ಸರಿ," ಎಂದು ಅವನ ಮಾತಿಗೆ ಒಪ್ಪಿದರು.